ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ

ಎಂ ವಿ ಸಿ .ನಂ :117/2025

ಪಿ.ಡಬ್ಲ್ಯು: 2

| | |
|---|---|
| ಸಾಕ್ಷಿದಾರರ ಹೆಸರು | ಡಾಃ ಆನಂದ್ ಕುಮಾರ್ |
| ತಂದೆಯ ಹೆಸರು | ಶ್ರೀನಿವಾಸಪ್ಪ |
| ಪ್ರಾಯ | **42** ವರ್ಷ |
| ಉದ್ಯೋಗ | ಕೀಲು ಮತ್ತು ಮೂಳೆ ವೈದ್ಯರು |
| ವಾಸಸ್ಥಳ | ಮಡಿಕೇರಿ |

**ದಿಃ20.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಎಸ್ ಆರ್ ವಕೀಲರಿಂದಃ**

ನಾನು 2015 ರಿಂದ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಕೀಲು ಮತ್ತು ಮೂಳೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಅರ್ಜಿಗೆ ಸಂಬಂಧಿಸಿದಂತೆ ದಿಃ 17.03.2025 ರಂದು ನಯಾಸ್ ಎಂಬಾತ ಅಪಘಾತದ ಹಿನ್ನೆಲೆಯಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಸದರಿಯವರ ಕೇಸ್ ಫೈಲನ್ನ ಸ್ವೀಕರಿಸಿ ಪರಿಶೀಲಿಸಲಾಗಿ. ಬಲಗಾಲಿನ ಟಿಬಿಯ ಮತ್ತು ತ್ರಿಬುಲ ಮೂಳೆಗಳು ಮುರಿದಿದ್ದವು. ಮೂಳೆ ಮುರಿದಿರುವುದನ್ನು ಎಕ್ಸರೆ ತೆಗೆದು ಖಚಿತಪಡಿಸಿಕೊಂಡು ದಿಃ19.03.2025 ರಂದು ಸದರಿಯವರಿಗೆ ಶಸ್ತ್ರ ಚಿಕಿತ್ಸೆಗೆ ಅಳವಡಿಸಿ ಅವರಿಗೆ ರಾಡ್ ಮತ್ತು ಸ್ಕ್ರೂಸ್ (ಸಿಆರ್ ಐ ಎಫ್ ಮತ್ತು ಐ ಎಂ ನೈಲ್) ಅಳವಡಿಸಿರುತ್ತೇನೆ. ಸದರಿಯವರನ್ನು ದಿಃ 24.03.2025ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಿದೆ. ಸದರಿಯವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದು

ದಿ:09.02.2026ರಂದು ಸದರಿಯವರನ್ನ ತಪಾಸಣೆಗೊಳಪಡಿಸಿದಾಗ ಸದರಿಯವರಿಗೆ ಮೂಳೆ ಕೂಡಿರುತ್ತದೆ. ಮುಂದುವರೆದು, ಅರ್ಜಿದಾರರನ್ನ ಅಂಗನ್ಯೂನ್ಯತೆ ವಿಶ್ಲೇಷಣೆಗೆ ಒಳಪಡಿಸಿದಾಗ ಸದರಿಯವರಿಗೆ ಶೇಖಡ 6 ರಷ್ಟು ಬಲ ಕೆಳ ಅಂಗಕ್ಕೆ ಅಂಗನ್ಯೂನ್ಯತೆ ಇರುವುದು ಕಂಡುಬಂದಿದೆ. ಸದರಿ ಪ್ರಮಾಣದ ಅಂಗನ್ಯೂನ್ಯತೆ ಅರ್ಜಿದಾರನಿಗೆ ಶಾಶ್ವತ ಅಂಗನ್ಯೂನ್ಯತೆ ಆಗಿರುತ್ತದೆ. ಅರ್ಜಿದಾರನಿಗೆ ಅಳವಡಿಸಿರುವ ರಾಡು ಮತ್ತು ಇತರ ಪರಿಕರರನ್ನ ಬೇರ್ಪಡಿಸಲು ಮುಂದಿನ ಚಿಕಿತ್ಸೆ ಅವಶ್ಯಕತೆ ಇರುತ್ತದೆ. ಅರ್ಜಿದಾರನಿಗೆ ಸಂಬಂಧಿಸಿದ ಅಂಗನ್ಯೂನ್ಯತೆ ಪ್ರಮಾಣ ಪತ್ರ, 2 ಎಕ್ಸರೆ ಶೀಟುಗಳು ಮತ್ತು ಕೇಸ್ ಶೀಟನ್ನು ಹಾಜರು ಮಾಡಿದ್ದು, ಅವುಗಳನ್ನ ನಿಪಿ 19 ರಿಂದ 22 ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ. ಪಿ ಟಿ ಜಿ ಕೆ ವಕೀಲರಿಂದ:**

ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.